"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 14] ಶುಕ್ರವಾರ 28—9—45. [ಬಿಡಿ ಪ್ರತಿ 3 ಪೈ

ಬ್ರಿಟಿಷರು ಈಜಿಪ್ಟನ್ನು ಬಿಡವುದಿಲ್ಲ

ಮಲಯಾ ಸ್ವಾತಂತ್ರ್ಯ ಚಳುವಳಿ

ಕಾಂಜೀವರದಲ್ಲಿ ಹೋಟೆಲುಗಳ ಮುಷ್ಕರ

ಇಂಡಿಯನ್ ನ್ಯಾಷನಲ್ ಆರ್ಮಿ ಜನರು ಚಕ್ರವರ್ತಿಗಳ ವಿರುದ್ಧ ಯುದ್ಧ ಹೂಡಿದರೆಂಬ ಆಪಾದನೆಗೆಗಾಗಿ ವಿಚಾರಣೆಗೊಳಗಾಗುವರೆಂದೂ, ವಿಚಾರಣೆ ಬಹಿರಂಗವಾಗಿ ನಡೆಯುವುದೆಂದೂ, ಆಪಾದಿತರ ರಕ್ಷಣೆ ಬಗ್ಗೆ ದೇಸಾಯಿ, ಸಪ್ರೂ, ಜಯ್‌ಕರರು ಮೇಲ್ವಿಚಾರಣೆ ನಡೆಸುವರೆಂದೂ ತಿಳಿಯಬಂದಿದೆ.

.....

ಬೊಂಬಾಯಿನಲ್ಲಿ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ, "ಭಾರತವನ್ನು ಬಿಟ್ಟ ಹೊರಡಿರಿ" ಎಂಬ ಅಂಶದ ಮೇಲೆ ಕಾಂಗ್ರೆಸ್ ಚುನಾವಣಾ ಕಾರ್ಯಕ್ರಮ ಏರ್ಪಡಿಸಲಾಗುವುದೆಂದು ಶ್ರೀ ಜವಹರಲಾಲರು ತಿಳಿಸಿದರು.

.....

ಈಜಿಪ್ಟಿನ ಮುಖಂಡರು ಹೊರಡಿಸಿದ ಬ್ರಿಟೀಷ ಸೈನ್ಯ ಈಜಿಪ್ಟಿನಿಂದ ಹೊರಟು, ಆಂಗ್ಲೋ ಈಜಿಪ್ಟಿನ ಕರಾರು ಒಪ್ಪಂದದಂತಾಗಬೇಕೆಂಬ ವಿಷಯದಲ್ಲಿ ಬ್ರಿಟನ್ನು ಈಗ ಸಕಾಲವಲ್ಲದ್ದರಿಂದ ಈಜಿಪ್ಟ ಬಿಡಲ್ಲವೆಂದು ಲಂಡನ ವಾರ್ತೆ.

ಬೊಂಬಾಯಿ ಫನ್ಡೆ ವಿಲ್ಲಿಗೆ ಬೆಂಕಿ ಬಿದ್ದು 75 ಸಾವಿರ ರೂ. ಅಸ್ತಿ ನಷ್ಟವಾಗಿದೆ.

ಕಾಂಜೀವರದಲ್ಲಿ ಸಕ್ಕರೆ ಸರಪರಾಜು ಮಾಡುವ ರೀತಿನೀತಿ ಖಂಡಿಸಲು ಇಲ್ಲಿಯ ಹೋಟೆಲುಗಳು ಈ ದಿನದಿಂದ ಬಾಗಿಲು ಮುಚ್ಚಿವೆ.

ಸಿಂಗಪುರ ಸೆ 26 — ಮಲಯಾದಲ್ಲಿನ ಸಂಯುಕ್ತ ಜಾತಿಜನರು ಮಲೆಯಾಕ್ಕೆ ಸ್ವಾತಂತ್ರ್ಯ ಕೇಳಿಕೆ ಪರಿಣಾಮವಾಗಿ ಉತ್ತರ ಜೊಹೋರಿನಲ್ಲಿ ದಂಗೆ ಪ್ರಾರಂಭವಾಯಿತು. ಬ್ರಿಟಿಷ ಸೈನಿಕರು ಸೈಗಾಂನಲ್ಲಿ ಮೆಷಿನಗನ್ನು ಪಯೋಗಿಸಿ ದಂಗೆ ಅಡಗಿಸಿದರು.

ಅರ್ಜಂಟೈನಾದಲ್ಲಾದ ಗಲಭೆ ಪರಿಣಾಮವಾಗಿ 150 ಮಂದಿ ಮುಖಂಡರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

.....

ಮುದರಾಸಿನ ಶ್ರೀ ಮುದ್ದುರಂಗ ಮೊದಲಿಯಾರರು, ತಮಿಳುನಾಡಿಗೆ ಶ್ರೀ ರಾಜಗೋಪಾಲಾಚಾರ್ಯರ ಮುಖಂಡತ್ವ ಬೇಕಿಲ್ಲವೆಂದು ಹೇಳಿರುವರು.

ಸವರ್ 1 ಕ್ಕೆ	ರೂ. 51 12-0
ಚಿನ್ನ ತೊಲ 1 ಕ್ಕೆ	77-4-0
ಬೆಳ್ಳಿ	1-7-0

ವರ್ತಮಾನ ಸಂಗ್ರಹ

ಅಖಿಲ ಭಾರತ ಅಯ್ಯಂರ್ಗೇದಿ ಕಾಂಗ್ರೆಸಿನ 31 ನೇ ಅಧಿವೇಶನದ ಕಾರ್ಯಕಾರಿ ಮಂಡಲದ ದ್ವಿತೀಯ ಅಧಿವೇಶನವು ಇದೇ 30 ರಲ್ಲಿ ಮಂಗಳೂರು ಅತ್ತಾವರದಲ್ಲಿರುವ ಶಂಕರ ವಿಠಲ ಮೋಟಾರು ಕಂಪೆನಿ ಕಛೇರಿಯಲ್ಲಿ ಬೆಳಿಗ್ಗೆ ಹತ್ತುಘಂಟೆಗೆ ಸೇರುವುದು.

ಂ ಂ

ಬೊಂಬಾಯಿನಲ್ಲಿ ಹಿಂದೂ ಮುಸ್ಲಿಂ ಹೊಡೆದಾಟವಾಗಿ 11 ಮರಣಗಳೂ, ಐವತ್ತು ಮಂದಿಗಳಿಗೆ ಗಾಯವೂ ಆಗಿದೆ. ಇವರ ಪರಿಶೀಲನೆಯಾಗುತ್ತಿದೆ.

ಂ ಂ

ರಾಯಲ್ ಇಂಡಿಯನ್ ನೇವಿಯಲ್ಲಿ ಏಪ್ರಿಲ್ಲಿನಿಂದ ಒಂಭತ್ತು ಸಾವಿರ ಮಂದಿ ವಿಸರ್ಜಿಸಲ್ಪಡುವುದಾಗಿ ಹೇಳಲಾಗಿದೆ.

ಂ ಂ

ನೆಹರೂ ನಿಧಿಗೆ ಕೆನಿಯಾ ಭಾರತೀಯರು ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಂ ಂ

ಗಾಂಧೀಜಿ ಕಲ್ಕತ್ತವನ್ನು ನವೆಂಬರ 9 ಕ್ಕೆ ತಲುಪುವರೆಂದೂ ಬಂಗಾಳದಲ್ಲಿ ಒಂದು ತಿಂಗಳು ಪ್ರವಾಸ ನಡೆಸುವರೆಂದೂ ಪ್ರಕಟವಾಗಿದೆ.

ಂ ಂ

ಬ್ಯಾಂಕಾಂಕಿನಲ್ಲಿ ಎರಡು ಸಾವಿರ ಮಂದಿ ನ್ಯಾಷನಲ್ ಆರ್ಮಿಯ ಜನಗಳಿರುವರು.

ಂ ಂ

ಬಿಹಾರ ಸರ್ಕಾರದವರು ರಾಂಚಿ ಹತ್ತಿರ ಒಂದು ಮಾದರಿ ಕ್ಯಾಂಪಿನ ಜೈಲನ್ನು ಸ್ಥಾಪಿಸಲಿರುವರು.

ಂ ಂ

ಭಾರತದ ಕಾಗೆ ಭಂಗಾರವನ್ನು ಬ್ರಿಟನ್ನಿಗೆ ಸರಬರಾಜು ಮಾಡುವ ಯೋಜನೆ ಲಂಡನ್ನಲ್ಲಿ ತಲೆದೋರಿದೆ.

ಂ ಂ

ಬೆಂಗಳೂರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿಗೆ ಮೂರು ಮಂದಿ ಬ್ರಿಟೀಷ ವಿಜ್ಞಾನಿಗಳು ಬಂದಿದ್ದಾರೆ.

ಂ ಂ

ಅಮೇರಿಕಾವೊಂದೆ ಜಪಾನಿನ ಮೇಲೆ ಆಡಳಿತ ನಡೆಸುತ್ತಿರುವುದು ರಷ್ಯಾಕ್ಕೆ ಅಸಂತೃಪ್ತಿಯಾಗಿದೆ.

ವಾರ್ತಾತರಂಗ

ಭಾರತಕ್ಕೆ ಮೊದಲು ಸ್ವಾತಂತ್ರ್ಯ ಘೋಷಿಸಬೇಕೆಂದು ಫೆನ್ನರ್‌ಬ್ರಾಕ್ವೆಯವರು ಅಟ್ಲಿಯವರನ್ನು ಒತ್ತಾಯ ಪಡಿಸಿರುವರು.

ಂ ಂ

ಟೋಕಿಯೋದಲ್ಲಿ ಮೆಕ್‌ಅರ್ಥರರನ್ನು ತಾ || 27 ರಲ್ಲಿ ಜಪಾನ್ ಚಕ್ರವರ್ತಿ ಹಿರೋಹಿಟೋರವರು ಭೇಟಿ ಮಾಡಿ ಅರ್ಧಘಂಟೆಗಳ ಕಾಲ ಮಾತು ಕತೆ ನಡೆಸಿದರು.

ಂ ಂ

ಜರ್ಮನ್ ನೌಕಾ ಸಡೆಗಳು ರಷ್ಯಾ ಬ್ರಿಟನ್ನು ಸಂಸ್ಥಾನ ಈ ಮೂರು ರಾಷ್ಟ್ರಗಳೂ ಸಮವಾಗಿ ಹಂಚಿಕೊಳ್ಳುವುದೆಂದೂ, ಜಪಾನಿನ ನೌಕಾಪಡೆ ವಿಷಯ ಇನ್ನೂ ನಿರ್ಧಾರವಾಗಿಲ್ಲವೆಂದು ಗೊತ್ತಾಗಿದೆ

ಂ ಂ

ಬ್ರಿಟನ್ನಿನಲ್ಲಿ 90 ರೂ. ಬೆಲೆಭಂಗಾರ ಯುರೋಪಿನಲ್ಲಿ ಕಾಳ ಸಂತೆಯಲ್ಲಿ ರೂ. 390 ಕ್ಕೆ ಮಾರಾಟವಾಗುತ್ತಿದೆಯೆಂದು ಹೇಳಲಾಗಿದೆ.

ಂ ಂ

ತಾ || 26 ರಲ್ಲಿ ನಡೆದ ಮೈಸೂರು ನಗರ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಸಂಸ್ಥಾನದಲ್ಲಿ ಪ್ರತಿಬಂಧಕಾಜ್ಞೆಗಳನ್ನು ತೆಗೆಯಬೇಕೆಂದು ನಿರ್ಣಯಿಸಿದರು.

ಂ ಂ

ಜಪಾನಿನ ಮೇಲೆ ಜಂಟಿ ಅಧಿಕಾರ ವಿರಬೇಕೆಂದು ಲಂಡನ್ ಕಾನ್ಫರೆನ್ಸಿನಲ್ಲಿ ರಷ್ಯಾ ಕೇಳುವುದಂತೆ.

ಂ ಂ

ಡೆಟ್ರೋಯಟ್ ಸೆ 21— ಫೋರ್ಡ್ ಮೋಟಾರು ಕಂಪೆನಿ ಅಧ್ಯಕ್ಷರಾದ ಹೆನ್ರೀ ಫೋರ್ಡರು ರಾಜೀನಾಮೆ ಇತ್ತಿರುವರು. ಅತನ ಮೊಮ್ಮಗ ಹೆನ್ರೀ ಫೋರ್ಡ್ (ಎರಡನೆ) ಈ ಸ್ಥಾನವನ್ನಲಂಕರಿಸುವನು.

ಂ ಂ

ಭಾರತವು ಸ್ವತಂತ್ರವಾದೊಡನೆ ಕಾಂಗ್ರೆಸ್ ವಿಸರ್ಜನೆಯಾಗುವುದೆಂದು ಸರದಾರ್ ಪಟೇಲರು ನುಡಿದಿರುವರು.

ಸ್ವಾರಸ್ಯವಾದ ಸುದ್ದಿಗಳು

ದಕ್ಷಿಣ ಆಫ್ರಿಕಾದ ಡರ್ಬನ್ನಿನಲ್ಲಿ ಒಬ್ಬ ಸ್ತ್ರೀ ನಾಲ್ಕು ಮಕ್ಕಳನ್ನು ಒಟ್ಟಿಗೆ ಹೆತ್ತಿರುವಳು. ಎಲ್ಲಾ ಹೆಣ್ಣು.

ಂ ಂ

ಲಾಹೋರಿನ ಒಂದು ಮುಸ್ಲಿಂ ಸಭೆಯಲ್ಲಿ ಅಹೆರಾರ್ ಮುಖಂಡರಾದ ಮೌ|| ಮಿಸ್ತೌಹರಾಲಿಯವರು, ಎ || ಜಿನ್ನಾರವರು ತಾವು ಮುಸ್ಲಿಂರಲ್ಲರೆಂದು 1918 ರಲ್ಲಿ ತಮ್ಮ ಮದುವೆ ಕಾಲದಲ್ಲಿ ಹೇಳಿರುವರೆಂದೂ, ಅವರು ಮುಸ್ಲಿಂರ ಮುಖಂಡರಾಗಿರಲು ಅರ್ಹರಾಗಿಲ್ಲವೆಂದೂ ಹೇಳಿರುವರು.

ಂ ಂ

ಕಾರ್ಕ್‌ಪುರದ ಮುನಿಸಿಪಾಲಿಟಿಯವರು ಸೂಳೆಗಾರಿಕೆಗೆ ಲೈಸೆನ್ಸು ಜಾರಿಗೆ ತರಲಿರುವರೆಂದೂ, ಅದಕ್ಕೆ ವರ್ಷಕ್ಕೆ 60 ರೂ. ಫೀಜು ವಿಧಿಸುವರೆಂದೂ ಒಂದು ವರದಿ ತಿಳಿಸುತ್ತದೆ.

ಂ ಂ

ಅಮೇರಿಕಾದ 16 ವರ್ಷದ ಬಿಲ್ ಔಟ್‌ಎಲ್ ಎಂಬಾತನು ಚಲನಚಿತ್ರ ಅತ್ಯಂತ ಹೆಚ್ಚಾಗಿ ನೋಡಿದವರಲ್ಲಿ 1 ನೇ ನಂಬರ್. ಈತನು 1944 ನೇ ಮಾರ್ಚಿ 4 ರಿಂದ 1945 ನೇ ಮಾರ್ಚ್ 4 ರವರೆಗೆ 705 ಚಿತ್ರಗಳನ್ನು ನೋಡಿರುವನಂತೆ.

ಂ ಂ

ತಮ್ಮ ಸೈನಿಕ ಗಂಡಂದಿರಿಗೆ ಅವಿವೇಯ ರೀತಿ ವರ್ತಿಸುವ ಎಲ್ಲಾ ಅಮೇರಿಕ ಸ್ತ್ರೀಯರ ತಲೆಯನ್ನು ಬೋಳಿಸ ಬೇಕೆಂದು ಅಮೇರಿಕ ಆಪರಾ ಹಾಡುಗಾರಕಳಾದ ಗ್ರೇಸ್ ಮೂರ್ ಹೇಳಿರುತ್ತಾಳೆ.

ಂ ಂ

ಬ್ರಿಟಿಷ್ ಹುಡಗಿಯರು ಪ್ರಪಂಚದಲ್ಲೆಲ್ಲಾ ಬಹು ಚೆನ್ನಾಗಿ ಮುತ್ತು ಕೊಡುವುದರಲ್ಲಿ ಅಗ್ರಗಣ್ಯರೆಂದು ಅಮೆಂರಿಕ ಸೋಲ್ಜರುಗಳು ಅಭಿಪ್ರಾಯ ಪಟ್ಟಿರುವರಂತೆ.

ಂ ಂ

ಇನ್ನು ಹತ್ತು ವರ್ಷಗಳಲ್ಲಿ ಭಾರತವು ಪ್ರಸಿದ್ಧ ರಾಷ್ಟ್ರವಾಗುವುದೆಂದು ಸರ್ ರಾಮಸ್ವಾಮಿಯವರು ಕಲ್ಕತ್ತಾದಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಂ ಂ

ಜಾವಾ ದ್ವೀಪವು ಸ್ವತಂತ್ರ ರಾಜ್ಯವೆಂದೂ, ಇನ್ನು ಮುಂದೆ ಸ್ವತಂತ್ರವಾಗಿರುವುದೆಂದೂ ಘೋಷಿಸಿರುವರು.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್

ಮೈಸೂರು

— ನೋಟೀಸ್ —

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್ ಸಂಸ್ಥೆಯ ಷೇರುದಾರರುಗಳ 25 ನೇ ಸಾಧಾರಣ ಜನರಲ್ ಮೀಟಿಂಗು, ಮೈಸೂರು ಚಾಮರಾಜರಸ್ತೆಯಲ್ಲಿರುವ ಸಹಕಾರ ಭವನದಲ್ಲಿ, ಅಕ್ಟೋಬರ್ 31 ನೇ ತಾರೀಖು ಬುಧವಾರ ಸಾಯಂಕಾಲ 5 ಘಂಟೆಗೆ, ಈ ಕೆಳಗೆ ಕಂಡ ಕಾರ್ಯಕ್ರಮವನ್ನು ವ್ಯವಹರಿಸಲು, ನಡೆಸಲ್ಪಡುವುದೆಂದು ಈ ಮೂಲಕ ತಿಳಿಸಲಾಗಿದೆ,—

1 1945 ನೇ ಜೂನ್ 30ಕ್ಕೆ ಆಖೈರಾದ ಸಾಲಿನ ಕಂಪೆನಿ ಡೈರೆಕ್ಟರುಗಳ ವರದಿ ಮತ್ತು ಆಡಿಟ್ಟಾದ ಲೆಖ್ಖವನ್ನು ಅಂಗೀಕರಿಸುವುದು.

2 ಡಿವಿಡೆಂಡ್ ಮತ್ತು ಬೋನಸ್ಸನ್ನು ನಿರ್ಧರಿಸುವುದು.

3 ಇಬ್ಬರು ಡೈರೆಕ್ಟರುಗಳನ್ನು ಚುನಾಯಿಸುವುದು.

4 ಚಾಲ್ತಿ ಸಾಲಿಗೆ (1 ನೇ ಜುಲೈ 1945 ರಿಂದ 30 ನೇ ಜೂನ್ 1946 ರವರೆಗೆ) ಆಡಿಟರನ್ನು ನೇಮಿಸುವುದು, ಮತ್ತು ಅವರ ಸಂಭಾವನೆಯನ್ನು ನಿಷ್ಕರ್ಷಿಸುವುದು.

ಕಂಪೆನಿಯ ಷೇರು ವರ್ಗದ ಪುಸ್ತಕಗಳು 1945 ನೇ ಅಕ್ಟೋಬರ್ 15 ನೇ ತಾರೀಖಿನಿಂದ ನವೆಂಬರ್ 1 ನೇ ತಾರೀಖಿನವರೆಗೆ, ಎರಡು ದಿನಗಳೂ ಸೇರಿ, ಮುಚ್ಚಲ್ಪಡುವುದು.

ಬೋರ್ಡಿನ ಆಜ್ಞೆಯ ಮೇರೆ
ಬಿ. ಎಸ್. ವಿಶ್ವೇಶ್ವರಯ್ಯ
ಸೆಕ್ರೆಟರಿ

ಮೈಸೂರು
ತಾ || 22-9-1945

ಎ. ಸೂ.— ಲಭ್ಯರು ಡಿವಿಡೆಂಡ್ ಮತ್ತು ಬೋನಸ್ಸು ನಿರ್ಧರಿಸಲ್ಪಟ್ಟ ನಂತರ, 1945 ನೇ ನವೆಂಬರ್ ತಾ|| 7 ಮತ್ತು ಆನಂತರ ಮೈಸೂರು ನಗರದಲ್ಲಿನ ಮೈಸೂರು ಬ್ಯಾಂಕಿನಲ್ಲಿ ವಿತರಣೆಮಾಡಲ್ಪಡಲಾಗುವುದು. ಸದಸ್ಥಳದಲ್ಲಿರುವ ಷೇರುದಾರರಿಗೆ, ಅವರ ರಿಜಿಸ್ಟರಾದ ವಿಳಾಸಗಳಿಗೆ, ರೂ. 10 ಮತ್ತು ಅದಕ್ಕಿಂತ ಕಡಮೆಯಾಗಿರತಕ್ಕ ಮೊಬಲಗನ್ನು. ಮನಿಯಾರ್ಡರು ಮೂಲಕ, ಮನಿಯಾರ್ಡರ್ ಕಮಿಷನ್ ಜಾತಾ ಕಳುಹಿಸಲಾಗುವುದು. 1945 ನೇ ಅಕ್ಟೋಬರ್ 15 ರಲ್ಲಿ ಮೆಂಬರುಗಳ ರಿಜಿಸ್ಟರಿನಲ್ಲಿ ಯಾರು ಹೆಸರಿರುವುದೋ ಆ ಷೇರುದಾರರುಗಳಿಗೆಲ್ಲಾ ಡಿವಿಡೆಂಡು ಮತ್ತು ಬೋನಸ್ಸು ವಾರಂಟುಗಳು ಆರ್ಜೀ ಮೂಲಕ ಕಳುಹಿಸಲ್ಪಡುತ್ತೆ.

ಷೇರುದಾರರು ತಮ್ಮ ವಿಳಾಸದಲ್ಲಿ ಬದಲಾವಣೆಗಳೇನಾದರೂ ಇದ್ದಲ್ಲಿ ಕಂಪೆನಿಗೆ ಕೂಡಲೇ ತಿಳಿಸಬೇಕಾಗಿ ಕೋರಲ್ಪಟ್ಟಿದೆ.

ರಕ್ತವೃದ್ಧಿಗೆ—ಧಾತುಪುಷ್ಟಿಗೆ

ಶಕ್ತಿಸುಧಾ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೧೬೭ ಚಾಮರಾಜಪುರಂ ಮೈಸೂರು.

EVENING SHOWS

From 26-9-45

AT Opera—

Ali Baba &

Forty Thieves

(in Technicolor)

Featuring—

MARIA MONTEZ

JON HALL

TURHAN BEY

Daily 3 Shows

At Ranjit

Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್

ವೀಣಾ, ನರ್ಗಿಸ್,, ಷಾ ನವಾಸ್

ಪಾತ್ರವಹಿಸಿರುವರು

Edited, Priated and published by M. S. Krishna Rao, at the Satvavadi Press, Chamaraja Agrahar, Mysore



ಐ. ಜೆ. ಹಾಲ್

ಅವೇ ಜೀವಿ — ಮೈಸೂರು